ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 20/3/2020

ಸಂಪಾದಕೀಯ
EDITORIAL

# ಮಾಧ್ಯಮ ಅಗತ್ಯ ಸೇವೆ

## ಇದರ ಮಹತ್ವವನ್ನು ಸ್ಪೀಕರ್ ಅರಿಯಲಿ

ಕೊರೊನಾ ವೈರಸ್ ಜ್ವರದ ಹಿನ್ನೆಲೆಯಲ್ಲಿ ಮಾರ್ಚ್ 17ರಂದು ಮಹಾರಾಷ್ಟ್ರ ಸರಕಾರ ಒಂದು ಸುತ್ತೋಲೆಯನ್ನು ಹೊರಡಿಸಿದ್ದು, ಅದರಲ್ಲಿ ಎಲ್ಲ 'ಅಗತ್ಯ ಸೇವೆ'ಗಳನ್ನು ಹೊರತುಪಡಿಸಿ ಉಳಿದೆಲ್ಲ ಸಾರ್ವಜನಿಕ ಸೇವೆಗಳನ್ನೂ ಒಂದು ವಾರ ಕಾಲ ಸ್ಥಗಿತಗೊಳಿಸಲು ನಿರ್ದೇಶಿಸಿದೆ. ಈ ಅಗತ್ಯ ಸೇವೆಗಳಲ್ಲಿ ಅದು ಸಾರಿಗೆ ಸಂಪರ್ಕ, ವೈದ್ಯಕೀಯ ಸೇವೆಗಳ ಜೊತೆಗೆ ಮಾಧ್ಯಮವನ್ನೂ ಗುರುತಿಸಿದೆ. ಮಾರ್ಚ್ 19ರಂದು ದೇಶವನ್ನುದ್ದೇಶಿಸಿ ಮಾತನಾಡಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ದೇಶದೆಲ್ಲೆಡೆ ಮಾ.22ರಂದು ಒಂದು ದಿನದ ಸ್ವಯಂಪ್ರೇರಿತ 'ಜನತಾ ಕರ್ಫ್ಯೂ' ಆಚರಿಸಲು ಕರೆ ನೀಡಿದ್ದಾರೆ. ಇದೇ ದಿನ ಸಂಜೆ, ಎಲ್ಲರೂ



ತಮ್ಮ ಮನೆ ಬಾಗಿಲು ಅಥವಾ ಬಾಲ್ಕನಿಗಳಲ್ಲಿ ನಿಂತು 'ಅಗತ್ಯ ಸೇವೆ'ಗಳಲ್ಲಿ ನಿರತರಾಗಿರುವವರನ್ನು ಕರತಾಡನದ ಮೂಲಕ ಶ್ಲಾಘಿಸಲೂ ಕರೆ ನೀಡಿದ್ದಾರೆ. ಇದು ಹೀಗೆ ತಮ್ಮ ಮನೆ- ಸುರಕ್ಷತೆ ಎಲ್ಲವನ್ನೂ ಪರೀಕ್ಷೆಗಿಟ್ಟು, ಪರಿಸ್ಥಿತಿಯನ್ನು ಸಾಮಾನ್ಯ ಸ್ಥಿತಿಗೆ ತರಲು ಹೆಣಗಾಡುತ್ತಿರುವವರಲ್ಲಿ ಅಭಿಮಾನ ಮೂಡಿಸುವಂಥ ನಡೆ. ಅವರು ಉಲ್ಲೇಖಿಸಿದ ಅಗತ್ಯ ಸೇವಾನಿರತರಲ್ಲಿ ಮಾಧ್ಯಮದವರೂ ಇದ್ದಾರೆ. ಇದಕ್ಕಾಗಿ ಪತ್ರಕರ್ತರೂ ಸೇರಿದಂತೆ ಎಲ್ಲ ಸೇವಾನಿರತರೂ ಪ್ರಧಾನಿಗೆ ಕೃತಜ್ಞತೆ ಹೇಳಬೇಕಿದೆ.

ಹೀಗೆ, ಪ್ರಧಾನಿ ಹಾಗೂ ಮಹಾರಾಷ್ಟ್ರ ಸರಕಾರ, ಮಾಧ್ಯಮವನ್ನು ಅಗತ್ಯ ಸೇವೆಗಳಲ್ಲಿ ಉಲ್ಲೇಖಿಸಿರುವುದು ಮಾಧ್ಯಮದಲ್ಲಿ ಕರ್ತವ್ಯ ಪ್ರಜ್ಞೆಯನ್ನು ಜಾಗೃತಗೊಳಿಸುವ ಹಾಗೂ ಹೊಣೆಗಾರಿಕೆಯನ್ನು ಹೆಚ್ಚಿಸುವಂಥದ್ದಾಗಿದೆ. ವಸ್ತುನಿಷ್ಠ ಸುದ್ದಿಗಾರಿಕೆಯನ್ನು ಪರಿಪಾಲಿಸಿಕೊಂಡು ಬಂದ ಮಾಧ್ಯಮಗಳು ಈ ಹಿರಿಮೆಯನ್ನು ಬಿಟ್ಟುಕೊಡುವುದಿಲ್ಲ. ಪರಿಸ್ಥಿತಿ ಸಂಕಷ್ಟದ್ದಿರಲಿ, ಸಂಭ್ರಮದ್ದಿರಲಿ, ವರದಿಗಾರಿಕೆಗೆ ಅದರದ್ದೇ ಆದ ಹೊಣೆಗಳಿವೆ. ಕೊರೊನಾಪೀಡಿತ ವಲಯಗಳಿಂದ ಹೇಗೋ ಹಾಗೆ ಯುದ್ಧಗ್ರಸ್ತ ಪ್ರದೇಶಗಳಿಂದಲೂ ಪತ್ರಕರ್ತರು ವರದಿ ಮಾಡುತ್ತಾರೆ. ಹೀಗಾಗಿಯೇ, ಜಾಗ್ರತ ಮಾಧ್ಯಮಗಳು ನಿರ್ಬಂಧಗಳನ್ನೂ ಲೆಕ್ಕಿಸದೆ ತಮ್ಮ ಹೊಣೆಗಾರಿಕೆ ಮೆರೆಯುತ್ತವೆ. ಪತ್ರಕರ್ತರು ನಮ್ಮ ಪ್ರಜಾಪ್ರಭುತ್ವ ಜೀವಿತದ ಸ್ಥಿತಿಗತಿಗಳ ವಾಸ್ತವ ವರದಿ ನೀಡುತ್ತ ಜನತೆಯಲ್ಲಿ ಭರವಸೆ ತುಂಬುತ್ತಿರುತ್ತಾರೆ. ಪ್ರಸ್ತುತ ಕೊರೊನಾ ವೈರಸ್‌ನ ಆತಂಕದ ಕಾಲದಲ್ಲಿ, ಸರಿಯಾದ ಸುದ್ದಿ ನೀಡುವ ಮಾಧ್ಯಮಗಳಿಲ್ಲದ ಚಿತ್ರಣವೊಂದನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ?

ಆದರೆ ಕರ್ನಾಟಕ ರಾಜ್ಯದ ವಿಧಾನಸಭೆ ಕಲಾಪದ ಮಟ್ಟಿಗೆ ಈ ಮಾತನ್ನು ಆಡುವುದಕ್ಕೆ ಹಿಂಜರಿಯಬೇಕಾಗಿದೆ. ಯಾಕೆಂದರೆ ವಿಧಾನಸಭೆಯ ಅಧಿವೇಶನಕ್ಕೆ ಮಾಧ್ಯಮ ಛಾಯಾಗ್ರಾಹಕರಿಗೆ ಪ್ರವೇಶ ನಿರ್ಬಂಧವನ್ನು ಸ್ಪೀಕರ್ ಹೇರಿದ್ದಾರೆ. ಅದನ್ನು ವಿಕಾಸಸೌಧಕ್ಕೂ ವಿಸ್ತರಿಸಿ, ಬಳಿಕ ಪ್ರತಿರೋಧದ ಹಿನ್ನೆಲೆಯಲ್ಲಿ ಹಿಂದೆಗೆದುಕೊಳ್ಳಲಾಗಿದೆ. ಮಾಧ್ಯಮವನ್ನು ಅವಶ್ಯಕ ಸೇವೆ ಎನ್ನುವ ಪ್ರಧಾನಿಯವರ ಮಾತನ್ನು ಮಾನ್ಯ ಸ್ಪೀಕರ್ ಒಪ್ಪುವುದಾದರೆ, ಸದನ ಕಲಾಪಕ್ಕೆ ಅವರು ಒಡ್ಡಿರುವ ನಿರ್ಬಂಧವನ್ನು ಹಿಂತೆಗೆದುಕೊಳ್ಳಬೇಕಾದ್ದು ನ್ಯಾಯ. ಮುಕ್ತ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳಿಲ್ಲದೆ ಹೇಗೆ ಪ್ರಜಾಪ್ರಭುತ್ವ ನಡೆಯುವುದಿಲ್ಲವೋ ಹಾಗೇ ಮುಕ್ತ ಪತ್ರಿಕಾರಂಗವಿಲ್ಲದೆಯೂ ನಡೆಯುವುದಿಲ್ಲ, ಕರ್ನಾಟಕ ಈ ವಿಚಾರದಲ್ಲಿ ರಾಷ್ಟ್ರಕ್ಕೇ ಮಾದರಿಯಾಗಿತ್ತು. ಆ ಮಾದರಿಯನ್ನು ಮಾನ್ಯ ಸ್ಪೀಕರ್ ಉಳಿಸಿಕೊಳ್ಳಬೇಕಿದೆ.

ಈ ನಡುವೆ, ಬಿಕ್ಕಟ್ಟಿನಲ್ಲಿರುವ ಮಧ್ಯಪ್ರದೇಶ ಸರಕಾರ ಶುಕ್ರವಾರವೇ ಬಹುಮತ ಸಾಬೀತುಪಡಿಸಬೇಕೆಂದೂ, ಈ ಪ್ರಕ್ರಿಯೆಯನ್ನು ವಿಡಿಯೋ ದಾಖಲೀಕರಣ ಮತ್ತು ಸಾಧ್ಯವಾದಲ್ಲಿ ನೇರ ಪ್ರಸಾರ ಮಾಡುವಂತೆಯೂ ಸುಪ್ರೀಂ ಕೋರ್ಟ್ ಆದೇಶಿಸಿದೆ. ಇದು ಕೂಡ ಮಾಧ್ಯಮದ ಮಹತ್ವ ಹಾಗೂ ಜವಾಬ್ದಾರಿಯನ್ನು ಗುರುತಿಸಿದ ಒಂದು ಪ್ರಮುಖ ನಡೆಯೇ ಆಗಿದೆ. ಇದನ್ನೂ ಸ್ಪೀಕರ್, ಅವರನ್ನು ಬೆಂಬಲಿಸುತ್ತಿರುವ ಕರ್ನಾಟಕ ಸರಕಾರ, ಬಿಜೆಪಿ ನಾಯಕರು ಅರಿಯಬೇಕು. ಸಾಂವಿಧಾನಿಕ ಮಹತ್ವದ ಪ್ರಕರಣಗಳಲ್ಲಿ ಕೋರ್ಟ್ ಕಲಾಪದ ನೇರ ಪ್ರಸಾರ ಮಾಡಬೇಕು ಎಂಬ ಬಗ್ಗೆ ಕೂಡ ಒಂದು ಪ್ರಕರಣ ಸುಪ್ರೀಂ ಕೋರ್ಟ್ ಪೀಠದ ಮುಂದಿದೆ. ಈ ಎಲ್ಲದರಿಂದ ಪಾಠ ಕಲಿಯುವುದು, ತಮ್ಮ ನಡತೆ ತಿದ್ದಿಕೊಳ್ಳುವುದು ಎಲ್ಲರಿಗೂ ಗೌರವ ತರಬಲ್ಲದು.